(ರೂ.ಲಕ್ಷಗಳಲ್ಲಿ)

ಕ್ರ ಸಂ	ಅನುದಾನ	ವರ್ಷ					ಒಟ್ಟು	ಬಳಕೆಯಾಗಿರುವ ಒಟ್ಟು ಅನುದಾನ
		05–06	06–07	07–08	08–09	09–10		
1	ಎಸ್ಎಫ್ಸಿ ಮುಕ್ತನಿಧಿ		121.58	221.56	216 80		559.94	519.00
2	ಎಸ್ಎಫ್ಸಿ ವಿಶೇಷ	103.07	100.00	712.98			916 05	793.00
3	12ನೇ ಹಣಕಾಸು	35.12	22.68	60.46	30.73		148.99	66.66
4	ಎಸ್ಜಿಎಸ್ ಆರ್ವೈ	3.02	4.04	11.62	12.65		33.33	21.81

ಆ) –ಇಲ್ಲ–

ಇ) ದೂರು ಬಂದಿದ್ದಲ್ಲಿ, ತಪಾಸಣೆಗೆ ಒಳಪಡಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ವಹಿಸಲಾಗುವುದು.

1059 ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ, ರಬಕವಿ, ಬನಹಟ್ಟಿ ಮತ್ತು ಮಹಾಲಿಂಗಪುರ ಪಟ್ಟಣಗಳಲ್ಲಿ ಅಕ್ರಮವಾಗಿ ವಾಸವಾಗಿರುವ ಕುಟುಂಬಗಳ ಸಂಖ್ಯೆ ಎಷ್ಟು; ಎಷ್ಟು ಎಕರೆ ಪ್ರದೇಶ ಅಕ್ರಮವಾಗಿ ಅತಿಕ್ರಮವಾಗಿದೆ ಮತ್ತು ಯಾವ ಯಾವ ಇಲಾಖೆಗೆ ಸೇರಿದ ಜಮೀನಿನಲ್ಲಿ ಅತಿ ಕ್ರಮವಾಗಿದೆ;

ಆ) ಈ ಕುಟುಂಬಗಳು ಸುಮಾರು 25 ವರ್ಷಗಳಿಂದ ಅಲ್ಲಿ ಸಾವಿರಾರು ಎಕರೆ ಪ್ರದೇಶದಲ್ಲಿ ಪಕ್ಕಾ ಮನೆಗಳನ್ನು ಕಟ್ಟಿಕೊಂಡು ಇದ್ದರೆ, ಅವರೆಲ್ಲರಿಗೆ ಹಕ್ಕುಪತ್ರ ಕೊಡಲು ಇರುವ ತೊಂದರೆಗಳೇನು; ಹಾಗಿಲ್ಲದಿದ್ದಲ್ಲಿ, ಇದಕ್ಕೆ ಪರಿಹಾರವೇನು;

ಇ) ಈ ರೀತಿ ಅಕ್ರಮವಾಗಿ ಸ್ವಾಧೀನ ಪಡಿಸಿಕೊಂಡ ಆಸ್ತಿಗಳಿಂದ ನಗರಸಭೆಗಳಿಗೆ ಕೋಟ್ಯಾಧಿ ರೂಪಾಯಿಗಳು ಕರ ಹಾನಿಯಾಗುತ್ತಿದ್ದು, ಯಾವ ರೀತಿ ಸರಿಪಡಿಸಲಾಗುವುದು;

ಈ) ಅಕ್ರಮವಾಗಿರುವ ಕುಟುಂಬಗಳ ಆಸ್ತಿಗೆ ಕರ ವಸೂಲಿ ಮಾಡಲು ಬರುವುದೇ; ಇಲ್ಲವಾದಲ್ಲಿ ಸಕ್ರಮಗೊಳಿಸಲು ಇರುವ ನಿಯಮಾವಳಿಗಳೇನು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ)

1. ತೇರ್‌ದಾಳ್ ಪಟ್ಟಣ ಪಂಚಾಯಿತಿಯ ಸುಮಾರು 50 ಎಕರೆ ಪ್ರದೇಶ ಪುರಸಭೆ ಜಮೀನಿನಲ್ಲಿ ಅಕ್ರಮವಾಗಿ 2000 ದಿಂದ 2500 ಕುಟುಂಬಗಳು ವಾಸಮಾಡುತ್ತಿವೆ.
2. ರಬಕವಿ ಬನಹಟ್ಟಿ ನಗರಸಭೆ ಮತ್ತು ಮಹಾಲಿಂಗಪುರ ಪುರಸಭೆಗಳ ವ್ಯಾಪ್ತಿಯಲ್ಲಿನ ಪುರಸಭಾ ಜಾಗಗಳಲ್ಲಿ ಅಕ್ರಮವಾಗಿ ವಾಸವಾಗಿರುವ ಕುಟುಂಬಗಳು ಇರುವುದಿಲ್ಲ. ಆದರೆ ಅರಣ್ಯ ಮತ್ತು ಕಂದಾಯ ಇಲಾಖೆಗಳ ಜಾಗ ಒತ್ತುವರಿಯಾಗಿರುವುದು ಕಂಡು ಬಂದಿರುತ್ತದೆ.

ಆ)

1. ತೇರ್‌ದಾಳ್ ಪಟ್ಟಣ ಪಂಚಾಯಿತಿಯ ಜಮೀನಿನಲ್ಲಿ ಅಕ್ರಮ ಮಾಡಿರುವ ಫಲಾನುಭವಿಗಳನ್ನು ಸರ್ಕಾರದಿಂದ ಸಕ್ರಮ ಗೊಳಿಸಿದ ಹೊರತು ಹಕ್ಕುಪತ್ರ ನೀಡಲು ಬರುವುದಿಲ್ಲ.
2. ರಬಕವಿ ಬನಹಟ್ಟಿ ನಗರಸಭೆ ಮತ್ತು ಮಹಾಲಿಂಗಪುರ ಪುರಸಭೆಯ ಜಾಗಗಳಲ್ಲಿ ಅತಿಕ್ರಮಣ ಮನೆಗಳು ಕಟ್ಟಿರುವುದರಿಂದ ಸ್ಥಳೀಯ ಸಂಸ್ಥೆಗಳಿಂದ ಹಕ್ಕುಪತ್ರ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ)

1. ಪುರಸಭೆ ಜಾಗದಲ್ಲಿರುವ ಅತಿಕ್ರಮಣದಾರರ ಕಟ್ಟಡಗಳನ್ನು ಸರ್ಕಾರದಿಂದ ಸಕ್ರಮಗೊಳಿಸಿದಲ್ಲಿ ಪುರಸಭಾ ನಿಯಮಾವಳಿ ರೀತ್ಯಾ ತೆರಿಗೆ ವಿಧಿಸಬಹುದಾಗಿದೆ.
2. ಕಂದಾಯ ಮತ್ತು ಅರಣ್ಯ ಇಲಾಖೆಗಳಿಂದ ಅತಿಕ್ರಮಣದ ಜಮೀನುಗಳಲ್ಲಿ ಕಟ್ಟಡಗಳಿಗೆ ನಗರಸಭೆಯಿಂದ ಕರ ವಿಧಿಸಲು ಬರುವುದಿಲ್ಲ.

ಇ) –ಇಲ್ಲ–

ನಿಯಮಾವಳಿಗಳನ್ನು ರೂಪಿಸಿರುವುದಿಲ್ಲ.